# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 25.05.2019**

## ಥಣಿಸಂದ್ರ ವಾರ್ಡ್6ರಲ್ಲಿ ಅಭಿವೃಧ್ಧಿ ಕಾಮಗಾರಿಗಳ ತಪಾಸಣೆ:ಮಹಾಪೌರರು

ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ಆಡಳಿತ ಪಕ್ಷದನಾಯಕರು ರವರು ಇಂದು ವಾರ್ಡ್ 6ರ ಥಣಿಸಂದ್ರ ವಾರ್ಡ್‌ನಲ್ಲಿ ವಿವಿಧ ಅಭಿವೃಧ್ಧಿ ಕಾಮಗಾರಿಗಳ ತಪಾಸಣೆ ನಡೆಸಿದರು.

ವಾರ್ಡ್-6ರ ಥಣಿಸಂದ್ರ ಪ್ರದೇಶದ ಅಭಿವೃಧ್ಧಿ ಬಗ್ಗೆ Social Media ದಲ್ಲಿ Comments ಮಾಡಿದರ ಬಗ್ಗೆ ಇಂದು ತಪಾಸಣೆಯನ್ನು ಹಮ್ಮಿಕೊಂಡು ಪರಿಶೀಲನೆ ನಡೆಸಿದರು. ಸದರಿ ಥಣಿಸಂದ್ರ ವಾರ್ಡ್ 110 ಹಳ್ಳಿಯ ವ್ಯಾಪ್ತಿಯಲ್ಲಿ ಒಳಪಟ್ಟಿದ್ದು, ಇದುವರೆವಿಗೂ ಅಭಿವೃಧ್ಧಿ ಹೊಂದದೆ ಇದ್ದು, 2013ರ ನಂತರ ಅಂದರೆ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ.ಸಿದ್ದರಾಮಯ್ಯ ರವರು ಹೆಚ್ಚಿನ ಒತ್ತು ಕೊಟ್ಟಿ ಅನುದಾನ ನೀಡಿದ ನಂತರ ಹಂತ ಹಂತವಾಗಿ ಅಭಿವೃಧ್ಧಿಯ ಕಾಮಗಾರಿ ಕೈಗೆತ್ತಿಕೊಂಡು ಅಭಿವೃಧ್ಧಿ ಪಡಿಸಲಾಗುತ್ತಿದೆಯೆಂದು, ಈ ಕಾರ್ಯದಲ್ಲಿ ಮಾನ್ಯ ಸ್ಥಳೀಯ ಶಾಸಕರು ಹಾಗೂ ಮಂತ್ರಿಗಳು ಆಗ್ಗಿದಾಂಗೆ ತಪಾಸಣೆ ನಡೆಸಿ ಅಭಿವೃಧ್ಧಿ ಕಾರ್ಯ ಚುರುಕುಗೊಳಿಸಿದ್ದಾರೆ, ಆದರಿಂದಾಗಿ ಥಣಿಸಂದ್ರದಲ್ಲಿ ಅಭಿವೃಧ್ಧಿ ಕಾರ್ಯ ಕಾಣಬಹುದಾಗಿದೆ ಎಂದರು.

ಅಲ್ಲದೇ, ಥಣಿಸಂದ್ರ ವಾರ್ಡ್‌ನಲ್ಲಿ 120KM, UGD ಕಾಮಗಾರಿ ಅಡಿಯಲ್ಲಿ ಅಂದಾಜು ೮೦ಕೋಟಿ ವೆಚ್ಚದಲ್ಲಿ UGD ಕಾಮಗಾರಿ ಹಾಗೂ ನೀರು ಸಂಪರ್ಕ Water line ಕೊಡುವ ಕಾರ್ಯ ಪ್ರಗತಿಯಲ್ಲಿದೆ. ಅದರಲ್ಲಿ ಸುಮಾರು 4000 ನಿವಾಸಿಗಳಲ್ಲಿ ಕೇವಲ 120 ನಿವಾಸಿಗಳು ಮಾತ್ರ ಸಂಪರ್ಕ ಪಡೆದಿದ್ದು, ಇದರಿಂದಾಗಿ ಕಾಮಗಾರಿಗೆ ಅಡಚಾಣೆಯಾಗಿರುತ್ತದೆ. ಈ ಬಗ್ಗೆ ಕೂಡಲೇ ಸಂಪರ್ಕ ಕೊಡುವ ವ್ಯವಸ್ಥೆಗೆ ಮೊದಲ ಆಧ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಾರ್ಡ್-6ರಲ್ಲಿನ ಕಾಫಿ ಬೋರ್ಡ್ ಲೇಔಟ್, ಭುವನೇಶ್ವರಿನಗರ, ಸರಾಯಿ ಪಾಳ್ಯ, ಭಾರತ್‌ನಗರ, ಫಾತಿಮಾ ಲೇಔಟ್, ಅಮರಜ್ಯೋತಿ ಲೇಔಟ್, ಥಣಿಸಂದ್ರ ಹಾಗೂ ತುಬಾ ಲೇಔಟ್‌ಗಳಲ್ಲಿ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.ವತಿಯಿಂದ ಪೂರ್ಣಗೊಂಡ ಕಾಮಗಾರಿ ರಸ್ತೆಗಳ ಪುನರ್ ನಿರ್ಮಾಣ ಕಾರ್ಯ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಇದನ್ನು ಇನ್ನು ಹೆಚ್ಚಿನ ವೇಗದಲ್ಲಿ ಮಾಡುವಂತೆ ಸೂಚಿಸಿದರು. ಈ ರಸ್ತೆಗಳನ್ನು ಮುಂದಿನ ಹಂತದಲ್ಲಿ ನವ ಬೆಂಗಳೂರು ಯೋಜನೆ ಅಡಿಯಲ್ಲಿ ಡಾಂಬರೀಕರಣ ಕೈಗೆತ್ತಿಕೊಳ್ಳಲಾಗಿದ್ದು, ಶೀಘ್ರವಾಗಿ ಡಾಂಬರೀಕರಣ ಗೊಳಸಲಾಗುವುದು ಎಂದರು.

ತದನಂತರ, MSR North City ಬಳಿ ಬೃಹತ್ ನೀರುಗಾಲುವೆ ತಪಾಸಣೆ ನಡೆಸಿ Robotic ಯಂತ್ರದ ಮೂಲಕ Desilt ತೆಗೆಯುವ ಕಾರ್ಯ ಪ್ರಗತಿಯಲ್ಲಿರುವುದನ್ನು ಹಾಗೂ SWD ಅಧಿಕಾರಿಗಳು Robotic Exavator ಯಂತ್ರಗಳೊಂದಿಗೆ ಕಾಮಗಾರಿ ಎಲ್ಲಾ ಕಡೆ ಪ್ರಾರಂಭಿಸಿರುವುದನ್ನು ಗಮನಿಸಿದರು. ಅಲ್ಲದೇ ಥಣಿಸಂದ್ರ ಮುಖ್ಯರಸ್ತೆಯಲ್ಲಿ ಬೃಹತ್ ರಸ್ತೆ ವಿಭಾಗದಿಂದ ಈಗಾಗಲೇ ರಸ್ತೆ ಬದಿಯಲ್ಲಿನ ಡ್ರೈನ್‌ಗಳ ಡಿ ಸಿಲ್ಟ್ ಮಾಡಿದ್ದು, ಕಾಮಗಾರಿ ಪ್ರಗತಿಯಲ್ಲಿರುವುದನ್ನು ಪರಿಶೀಲಿಸಿದರು. ನಂತರ, ಸದರಿ ವಿಧಾನಸಭಾ ಕ್ಷೇತ್ರದಲ್ಲಿನ ಎಲ್ಲಾ ಸಿಲ್ಟ್ & ಟ್ರಾಕ್ಟರ್ ರವರುಗಳನ್ನು ಒಟ್ಟಾಗಿಸಿ ಥಣಿಸಂದ್ರ ವಾರ್ಡ್‌ನಲ್ಲಿ ಕಸ ಡೆಬ್ರಿಸ್‌ಗಳನ್ನು ತೆರವುಗೊಳಿಸಿ, ತೀವ್ರ ಸ್ವಚ್ಛತಾ ಅಂದೋಲನಾ ಕಾರ್ಯನಿರ್ವಹಿಸುತ್ತಿರುವುದನ್ನು ಸಹ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ನಗರ ಸಭಾ ಸದಸ್ಯರು ಮುಖ್ಯ ಅಭಿಯಂತರರುಗಳು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**





